ಅಸಲು ದಾವೆ ಸಂಖ್ಯೆ - 312/2018
ಪಿಡಬ್ಲ್ಯೂ - 01
ದಿನಾಂಕಃ 29.03.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎಸ್ ಎಸ್ ಪಿ ವಕೀಲರಿಂದ</u>

ದಾವೆ ದಾಖಲು ಮಾಡಿದ ನಂತರ ನಿಪಿ-7 ಜನನ ಪ್ರಮಾಣಪತ್ರವನ್ನು ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಜನನ ಪ್ರಮಾಣಪತ್ರ ಪಡೆಯಲು ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸಲೆನಿಯಸ್ ನಂ.92/2019 ನ್ನು ದಾಖಲಿಸಿದ್ದೆ ಎಂದರೆ ಸರಿ. ಅದರಲ್ಲಿ ದಿಃ 01.07.2019 ರಂದು ಆದೇಶ ಆಗಿರುತ್ತದೆ ಎಂದರೆ ಸರಿ. ನನ್ನ ಜನನ ದಿನಾಂಕಃ 06.02.1972. ಸದರಿ ಜನನ ದಿನಾಂಕವನ್ನು ನನ್ನ ಶಾಲಾ ದಾಖಲಾತಿ ಆಧಾರದ ಮೇಲೆ ದಾಖಲಿಸಿಕೊಂಡಿರುತ್ತೇನೆ. ಈ ದಾವೆ ದಾಖಲಿಸುವ ಮೊದಲು ಜನನ ದಾಖಲಾತಿಗಾಗಿ ತಹಶೀಲ್ದಾರ ಇವರಿಗೆ ಅರ್ಜಿ ನೀಡಿದ್ದೆ. ಅವರು ದಾಖಲಾತಿಗಳು ಸುಟ್ಟಿರುತ್ತವೆ ಅಂತಾ ಹಿಂಬರಹ ಕೊಟ್ಟಿರುತ್ತಾರೆ. ಸದರಿ ಹಿಂಬರಹವನ್ನು ಈ ದಾವೆಯಲ್ಲಿ ಕೊಟ್ಟಿದ್ದೇನೆ. ಈ ದಾವಾ ದಾಖಲು ಮಾಡುವ ಮೊದಲು ಜನನ ಪ್ರಮಾಣಪತ್ರ ತೆಗೆದುಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ ಪ್ರತಿವಾದಿ ಕೈಪಿಯತನಲ್ಲಿ ಸಂಬಂಧವನ್ನು ನಿರಾಕರಿಸಿದ್ದರಿಂದ ತದನಂತರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಜನನ ಪ್ರಮಾಣಪತ್ರವನ್ನು ಪ್ರತಿವಾದಿಗೆ ಗೊತ್ತಾಗದಂತೆ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚನ್ನಬಸಪ್ಪನ ದತ್ತಕ ಮಗ ಪ್ರತಿವಾದಿಯ ಆಸ್ತಿಯನ್ನು ಎತ್ತಿಹಾಕಬೇಕು ಅಂತಾ ನನ್ನ ತಂದೆ ಹೆಸರು ಚನ್ನಬಸಪ್ಪ ಅಂತಾ ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹೆಸರು ಚನ್ನಬಸಪ್ಪ ಅಂತಾ ತೋರಿಸಲು ಶಾಲಾ ದಾಖಲಾತಿಗಳನ್ನು ಹೊರತುಪಡಿಸಿ ಬೇರೆ ದಾಖಲಾತಿಗಳು ಇರುವುದಿಲ್ಲ. ನನ್ನನ್ನು ಶಾಲೆಗೆ ನನ್ನ ತಂದೆ ದಾಖಲು ಮಾಡಿಸಿರುತ್ತಾರೆ. ನನ್ನನ್ನು ಶಾಲೆಗೆ ದಾಖಲಿಸುವಾಗ ನೀಡಿರುವ ಅರ್ಜಿಯ ದೃಡಿಕೃತ ನಕಲನ್ನು ಹಾಜರುಪಡಿಸಿಲ್ಲ. ಆಗ ಅನಸೂಯಾ ಬಡಿಗೇರ ಎಂಬುವವರು ಶಿಕ್ಷಕರು ಇದ್ದರು. ಅವರು ಜೀವಂತ ಇರುತ್ತಾರೆ. ಶಾಲೆಗೆ ದಾಖಲಿಸುವಾಗ ಯಾವ ಯಾವ ದಾಖಲೆಗಳನ್ನು ನೀಡಿರುತ್ತಾರೆ ಅವುಗಳ ನಕಲುಗಳನ್ನು ತೆಗೆದುಕೊಂಡು ಹಾಜರುಪಡಿಸಿಲ್ಲ. ನನ್ನ ಶಾಲಾ ದಾಖಲಾತಿಯಲ್ಲಿ ನನ್ನ ತಾಯಿ ಹೆಸರು ನಾಗವ್ವ ಅಂತಾ ಇರುತ್ತದೆ ಆದರೆ ನಾನು ದಾಖಲೆ ನೋಡಿಲ್ಲ. ನನ್ನ ತಂದೆ ಹೆಸರು ಚನ್ನಪ್ಪ ಇದ್ದರು ಸಹ ಶಾಲಾ ದಾಖಲಾತಿಗಳಲ್ಲಿ ಚನ್ನಬಸಪ್ಪ ಅಂತಾ ಸೃಷ್ಟಿಸಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾಗವ್ವಳ ಮೊದಲನೆಯ

ಗಂಡ ಚನ್ನಪ್ಪ ಮತ್ತು ಎರಡನೆಯ ಗಂಡ ಚನ್ನಬಸಪ್ಪ ಅಂತಾ ವಂಶಾವಳಿಯಲ್ಲಿ ತೋರಿಸಿರುತ್ತೇವೆ ಎಂದರೆ ಸರಿ. ಚನ್ನಪ್ಪ ಮತ್ತು ನಾಗವ್ವ ಇವರ ವೈವಾಹಿಕ ಜೀವನದಲ್ಲಿ ಮೂರು ಜನ ಮಕ್ಕಳು ಇದ್ದರು ಎಂದರೆ ಸರಿಯಲ್ಲ ಇಬ್ಬರು ಇದ್ದರು. ಅವರ ಹೆಸರು ಪ್ರತಿವಾದಿ ರಾಮೇಶ್ವರ ಮತ್ತು ಸರೋಜಿನಿ. ನಾನು ಸಹ ಚನ್ನಪ್ಪ ಮತ್ತು ನಾಗವ್ವಳ ಮಗಳು ಎಂದರೆ ಸರಿಯಲ್ಲ, ನಾನು ಚನ್ನಬಸಪ್ಪ ಮತ್ತು ನಾಗವ್ವ ಇವರ ಮಗಳು. ಚನ್ನಬಸಪ್ಪನ ಹೆಂಡತಿ ಗಂಗವ್ವ ಎಂದರೆ ಸರಿ. ಗಂಗವ್ವ ಒಬ್ಬಳೇ ಆತನ ಹೆಂಡತಿ ಎಂದರೆ ಸರಿ. ಚನ್ನಬಸಪ್ಪ ಮತ್ತು ಗಂಗವ್ವಳಿಗೆ ಯಾವುದೇ ಸಂತಾನ ಆಗಲಿಲ್ಲ ಎಂದರೆ ಸರಿ. ನಾಗವ್ವ ತವರಮೆಳ್ಳಿಹಳ್ಳಿಯ ನಮ್ಮ ಮನೆಯಲ್ಲಿಯೇ ತೀರಿಕೊಂಡಿರುತ್ತಾಳೆ. ಅವರ ಮರಣ ದಾಖಲೆ ಮಾಡಿಸಿಲ್ಲ. ನಾಗವ್ವ ದಿನಾಂಕಃ 31.08.2011 ರಂದು ತೀರಿಕೊಂಡಿರುತ್ತಾಳೆ ಎಂದರೆ ಸರಿ. ಎಸ್ ಡಿ ಎಂ ಆಸ್ಪತ್ರೆ ಧಾರವಾಡದಲ್ಲಿ ತೀರಿಕೊಂಡಿರುತ್ತಾಳೆ ಎಂದರೆ ಸರಿ. ಸದರಿ ನಾಗವ್ವಳನ್ನು ಪ್ರತಿವಾದಿಯೇ ಎಸ್ ಡಿ ಎಂ ಆಸ್ಪತ್ರೆ ಧಾರವಾಡಕ್ಕೆ ದಾಖಲಿಸಿದ್ದ ಎಂದರೆ ನಾವು ಮತ್ತು ಅವರು ಕೂಡಿ ದಾಖಲಿಸಿದ್ದೆವು. ಅವರ ಮರಣ ದಾಖಲೆಯನ್ನು ನಾನೇ ಬರೆಸಿದ್ದೇನೆ ಎಂದರೆ ಪ್ರತಿವಾದಿ ಬರೆಸಿರುತ್ತಾನೆ. ಆದರೆ ನಾನು ಆಸ್ಪತ್ರೆಯಲ್ಲಿ ಹಾಜರಿದ್ದೆ ಎಂದರೆ ಸರಿ. ನಾಗವ್ವಳ ಮರಣ ಪ್ರಮಾಣಪತ್ರದಲ್ಲಿ ಗಂಡನ ಹೆಸರು ಚನ್ನಪ್ಪ ಅಂತಾ ತೋರಿಸಿರುತ್ತಾರೆ ಎಂದರೆ ಸರಿ . ಸದರಿ ಮರಣ ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ ಎಂದರೆ ಸರಿ.

ನಾಗವ್ವಳ ಮರಣ ದಾಖಲೆಯಲ್ಲಿ ಗಂಡನ ಹೆಸರು ಚನ್ನಬಸಪ್ಪ ಅಂತಾ ತೋರಿಸಿಲ್ಲ ಅಂತಾ ರದ್ದು ಮಾಡಲು ಪ್ರಯತ್ನಿಸಿಲ್ಲ. ಅದು ಸರಿ ಇದ್ದ ಕಾರಣಕ್ಕೆ ನಾನು ರದ್ದು ಮಾಡಲು ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಗಂಗವ್ವ 2013 ರಲ್ಲಿ ತೀರಿಕೊಂಡಿರುತ್ತಾಳೆ ಎಂದರೆ ಸರಿ. ಸರೋಜಿನಿ ನನಗೆ ಅಕ್ಕ ಆಗಬೇಕು. ಸಾಕ್ಷಿಗೆ ಒಂದು ದಾಖಲೆ ತೋರಿಸಿ ಅದರಲ್ಲಿ ಸರೋಜಿನಿ ತಂದೆ ಚನ್ನಪ್ಪ ಹಳೇಬಂಕಾಪೂರ ಅಂತಾ ಇರುತ್ತದೆ ಎಂದರೆ ಸರಿ. ಚನ್ನಪ್ಪ ಹಳೆ ಬಂಕಾಪೂರದವರು ಎಂದರೆ ನನಗೆ ಗೊತ್ತಿಲ್ಲ ಅವರು ನನ್ನ ತಾಯಿಯ ಮೊದಲನೆ ಗಂಡ ಅಂತಾ ಮಾತ್ರ ಗೊತ್ತಿರುತ್ತದೆ. ನಾನು ನಮ್ಮ ತಾಯಿಗೆ ಮೊದಲನೆ ಗಂಡ ಎಲ್ಲಿಯವ ಅಂತಾ ಕೇಳಿ ತಿಳಿದುಕೊಂಡಿಲ್ಲ. ನನ್ನ ಅಕ್ಕನಿಗೂ ಸಹ ಕೇಳಿ ತಿಳಿದುಕೊಂಡಿಲ್ಲ. ಮೃತ ಗಂಗವ್ವಳನ್ನು ನಾನೇ ಜೋಪಾನ ಮಾಡಿರುತ್ತೇನೆ. ಗಂಗವ್ವಳನ್ನು ಪ್ರತಿವಾದಿ ಎಲ್ಲಿ ನೌಕರಿ ಮಾಡುತ್ತಿದ್ದ ಅಲಕ್ಲಿಗೆ ಕರೆದುಕೊಂಡು ಹೋಗುತ್ತಿದ್ದ ಎಂದರೆ 2 ದಿನ ಹೋಗಿ ಬರುತ್ತಿದ್ದರು. ಅವರ

ಆಸ್ಪತ್ರೆಯ ಖರ್ಚನ್ನು ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದ ಎಂದರೆ ಸರಿ. 2006 ರಲ್ಲಿ ದಾವಾ ಮನೆ ಆಸ್ತಿ ಪ್ರತಿವಾದಿ ಹೆಸರಿನಲ್ಲಿತ್ತು ಎಂದರೆ ಸರಿ. ಅವರ ದತ್ತಕ ತಂದೆ ತೀರಿಕೊಂಡ ನಂತರ ವಾರಸಾ ಪ್ರಕಾರ ಅವರ ಹೆಸರು ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಾಗದಂತೆ ಅವರೇ ಮಾಡಿಕೊಂಡಿರುತ್ತಾರೆ. ನಮಗೆ ಗೊತ್ತಾಗದಂತೆ ಪ್ರತಿವಾದಿ ವಾರಸಾ ಮಾಡಿಕೊಂಡಿರುತ್ತಾನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಊರಲ್ಲಿ ಇಲ್ಲದೇ ಇರುವಾಗ ಆತನಿಗೆ ಗೊತ್ತಾಗದಂತೆ ದಾವಾ ಮನೆ ಆಸ್ತಿಯನ್ನು ನನ್ನ ಹೆಸರಿನಲ್ಲಿ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ ಪ್ರತಿವಾದಿಯೇ ಅದನ್ನು ನನ್ನ ಹೆಸರಿನಲ್ಲಿ ಮಾಡಿಸಿರುತ್ತಾನೆ. ನಾನು ಹೊಲ ಕೇಳುತ್ತೇನೆ ಅಂತಾ ಮನೆ ಮಾತ್ರ ನನ್ನ ಹೆಸರಿನಲ್ಲಿ ಪ್ರತಿವಾದಿಯೇ ಮಾಡಿಸಿರುತ್ತಾನೆ, ಯಾವ ದಾಖಲೆ ಮೂಲಕ ಮಾಡಿಸಿರುತ್ತಾನೆ ನನಗೆ ಗೊತ್ತಿಲ್ಲ. ನನಗೆ ಸದರಿ ದಾವಾ ಮನೆಗೆ ನನ್ನ ಹೆಸರು ದಾಖಲಾಗಿರುವ ವಿಷಯ ಯಾವಾಗ ಗೊತ್ತಿರುತ್ತದೆ ಎಂದರೆ ಅದನ್ನು ಮಾಡಿದ ಒಂದು ವರ್ಷದ ನಂತರ ಗೊತ್ತಾಗಿರುತ್ತದೆ. 2007 ರಲ್ಲಿ ಹೊಲಕ್ಕೂ ಸಹ ನನ್ನ ಹೆಸರು ಹಚ್ಚುವಂತೆ ಪ್ರತಿವಾದಿಗೆ ಕೇಳಿದ್ದೇನೆ ಆಗ ನಾವು ಇಬ್ಬರು ಚೆನ್ನಾಗಿಯೇ ಇದ್ದೆವು, ಪ್ರತಿವಾದಿ ದಾಖಲೆಗಳನ್ನು ರೆಡಿ ಮಾಡಬೇಕು ಅಂತಾ ಮುಂದೂಡಿರುತ್ತಾನೆ. 2007 ರಲ್ಲಿ ಏಕೆ ದಾವೆ ಮಾಡಲಿಲ್ಲ ಎಂದರೆ ನಾವು ಇಬ್ಬರು ಚೆನ್ನಾಗಿಯೇ ಇದ್ದೆವು ಮುಂದೆ ಕೊಡುತ್ತಾನೆ ಅಂತಾ ಮಾಡಲಿಲ್ಲ. ಪ್ರತಿವಾದಿಗೆ ಗೊತ್ತಾಗದಂತೆ ದಾವಾ ಮನೆಗೆ ನನ್ನ ಹೆಸರು ನಾನೇ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಜಮಿನಿಗೆ ವಾರಸಾ ಪ್ರಕಾರ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ವಾರಸಾ ದಾಖಲಾತಿಯನ್ನು ರದ್ದು ಮಾಡಲು ಮೇಲ್ಮನವಿ ಸಲ್ಲಿಸಿಲ್ಲ. ದಾವಾ ಜಮೀನಿಗೆ ಇವತ್ತಿನವರೆಗೂ ಪ್ರತಿವಾದಿಯ ಹೆಸರೇ ಇರುತ್ತದೆ ಎಂದರೆ ಸರಿ. ಆ ಪ್ರಕಾರ ಪ್ರತಿವಾದಿಯೇ ದಾವಾ ಜಮೀನಿನ ಕಬ್ಜಾ ವಹಿವಾಟಿಯಲ್ಲಿರುತ್ತಾನೆ ಎಂದರೆ ಸರಿಯಲ್ಲ ನಾವೇ ಕಬ್ಜಾ ವಹಿವಾಟಿಯಲ್ಲಿರುತ್ತೇವೆ. ನಾನು ಕಬ್ಜಾ ವಹಿವಾಟಿಯಲ್ಲಿರುತ್ತೇನೆ ಅಂತಾ ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಚನ್ನಬಸಪ್ಪ ಪ್ರತಿವಾದಿಯನ್ನು ದಿನಾಂಕ 21.11.1988 ರಂದು ದತ್ತು ತೆಗೆದುಕೊಂಡಿರುತ್ತಾರೆ ಎಂದರೆ ನಾನು ಚಿಕ್ಕವಳಿದ್ದೆ ನನಗೆ ಗೊತ್ತಿಲ್ಲ. ನನಗೆ ತಿಳುವಳಿಕೆ ಬಂದ ನಂತರ ಪ್ರತಿವಾದಿ ಚನ್ನಬಸಪ್ಪನ ದತ್ತು ಮಗ ಅಂತಾ ಗೊತ್ತಾಗಿರುತ್ತದೆ.

ಪ್ರತಿವಾದಿ ಚನ್ನಬಸಪ್ಪನ ಕಾನೂನು ಬದ್ಧ ದತ್ತಕ ಮಗ ಎಂದರೆ ಸರಿಯಲ್ಲ. ದತ್ತಕ ಮಗ ಅಲ್ಲ ಅಂತಾ ಅದನ್ನು ರದ್ದುಪಡಿಸಲು ಕಾನೂನು ಕ್ರಮ ಕೈಗೊಂಡಿಲ್ಲ ನಾನು ಚನ್ನಬಸಪ್ಪನ ಕಾನೂನುಬದ್ಧ ಮಗಳು ಅಂತಾ ಘೋಷಣಾತ್ಮಕ ದಾವೆ ಮಾಡಿಲ್ಲ. ಚನ್ನಬಸಪ್ಪನ ಮಗಳು ಇರದೇ ಇರುವ ಕಾರಣಕ್ಕೆ ಆ ರೀತಿ ದಾವೆ ಮಾಡಿಲ್ಲ ಎಂದರೆ ಸರಿಯಲ್ಲ. ಹಳೇ ಬಂಕಾಪೂರದಲ್ಲಿ ಚನ್ನಪ್ಪನ ಆಸ್ತಿಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನನಗೆ ದಾವಾ ಆಸ್ತಿಯಲ್ಲಿ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನನಗೆ ಹಿಸ್ಸೆ ಕೇಳುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಬೇಕು ಸುಳ್ಳು ಕೇಸು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂಡಾಧಿಕಾರಿಗಳು.ಸವಣೂರು.